**ಓ ಎಸ್ ನಂಃ 325-14**
**ಪಿ ಡಬ್ಲ್ಯೂ ಃ 1**

**ದಿಃ 08-11-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 14 ನೇ ಪ್ರತಿವಾದಿ ಪರ ಶ್ರೀ ಜಿ ಪಿ ವಕೀಲರಿಂದ**

30. ಈರಮ್ಮನಿಂದ ವಿಲ್ ಆಗಿದೆ ಎಂದು ಹೇಳಿದ್ದೇನೆಂದರೆ ಸರಿ. ಆ ವಿಲ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ವಿಲ್ ನ ಆಧಾರದಲ್ಲಿ ನನ್ನ ಹೆಸರಿಗೆ ಖಾತೆ ಆಗಿತ್ತು ಅಂದರೆ ಸರಿ. ಆಗ ನಾನು ಜಮೀನಿನ ಹಕ್ಕುದಾರಳಾಗಿದ್ದೆ ಅಂದರೆ ಸರಿ. ದಿಃ23.01.2003 ರಂದು ನಾನು 14 ನೇ ಪ್ರತಿವಾದಿ ಮರಿರಂಗಯ್ಯ ಗೆ ಒಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದೇನೆಂದರೆ ಸರಿಯಲ್ಲ. ಆ ಕ್ರಯದ ಕರಾರು ಪತ್ರದಲ್ಲಿ ರೂ. 1 ಲಕ್ಷ 40 ಸಾವಿರ ವನ್ನು ಸಾಕ್ಷಿಗಳ ಸಮ್ಮುಖದಲ್ಲಿ ಪಡೆದುಕೊಂಡು ಉಳಿದ ರೂ. 10 ಸಾವಿರವನ್ನು ಕ್ರಯಪತ್ರ ನೋಂದಣಿ ಮಾಡಿಸುವಾಗ ಪಡೆದುಕೊಳ್ಳುತ್ತೇನೆಂದು ಹೇಳಿದ್ದೆ ಅಂದರೆ ಸರಿಯಲ್ಲ. ನಂತರ ದಿಃ15.03.2003 ರಂದು ಆ ಉಳಿಕೆ ಪ್ರತಿಫಲದ ಪೈಕಿ ರೂ. 8 ಸಾವಿರವನ್ನು ಪಡೆದುಕೊಂಡೆ ಅಂದರೆ ಸರಿಯಲ್ಲ.

31. 14 ನೇ ಪ್ರತಿವಾದಿ ರಾಮನಗರ ನ್ಯಾಯಾಲಯದಲ್ಲಿ ಓ ಎಸ್ 153/2005 ರಂತೆ ನನ್ನ ವಿರುದ್ದ ದಾವೆ ಸಲ್ಲಿಸಿದರು ಅಂದರೆ ಸರಿ. ಆ ದಾವೆಯಲ್ಲಿ ನಾನು ವಕೀಲರನ್ನು ಇಟ್ಟುಕೊಂಡಿದ್ದೆ ಅಂದರೆ ಸರಿ. ಆ ದಾವೆ ದಿಃ07.04.2007 ರಂದು ಡಿಕ್ರಿ ಆಯಿತು ಅಂದರೆ ಸರಿ. ಸದರಿ ಡಿಕ್ರಿ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಫ್ ಎ 1744/2007 ರಂತೆ ಮೇಲ್ಮನವಿ ಸಲ್ಲಿಸಿದ್ದೆ ಅಂದರೆ ಸರಿ. ದಿಃ31.07.2008 ರಂದು ವಜಾ ಆಯಿತು ಅಂದರೆ ಸಾಕ್ಷಿ ಅಲ್ಲಿಂದ ಇಲ್ಲಿಗೆ ಕಳುಹಿಸಿದ್ದಾರೆಂದು ನುಡಿಯುತ್ತಾರೆ. ನಂತರ ಆರ್ ಎ 73/2008 ರಂತೆ ಮೇಲ್ಮನವಿಯನ್ನು ರಾಮನಗರ

ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದೆ ಅಂದರೆ ಸರಿ. ದಿಃ08.12.2015 ರಲ್ಲಿ ಆ ಮೇಲ್ಮನವಿ ವಜಾ ಆಯಿತು ಅಂದರೆ ಸರಿ. ಸಾಕ್ಷಿ ಸ್ವತಃ ಅದರ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಆ ಮೇಲ್ಮನವಿ ಸಲ್ಲಿಸಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

32. ಆ ರೀತಿ ಕ್ರಯದ ಕರಾರು ಪತ್ರ ಆಗಿರುವುದು 2 ಎಕರೆ 21 ಗುಂಟೆಗೆ ಅಂದರೆ ಸಾಕ್ಷಿ ಅವರು ಮಾಡಿಕೊಂಡಿದ್ದಾರೆ ನಾವು ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಅದೇ ಸರ್ವೆ ನಂಬರ್ ಅಲ್ಲಿ ಅದಕ್ಕಿಂತ ಮೊದಲು ಶಿವಕುಮಾರ್ ರವರಿಗೆ 2 ಎಕರೆಯನ್ನು ಮಾರಾಟ ಮಾಡಿದ್ದೇವೆ ಅಂದರೆ ಸರಿ.

14ನೇ ಪ್ರತಿವಾದಿ ಹಣವನ್ನು ಕೊಟ್ಟಿದ್ದು ಅವರಿಗೆ ಕ್ರಯಪತ್ರ ನೋಂದಣಿ ಮಾಡಿಸಿಕೊಡುವುದನ್ನು ತಪ್ಪಿಸಲು ಈ ರೀತಿ ದಾವೆ ಹಾಕಿರುವುದು ಅಂದರೆ ಸರಿಯಲ್ಲ. ನನ್ನ ಸಹೋದರಿಯರು ಇನ್ನೊಂದು ದಾವೆ ಸಲ್ಲಿಸಿದ್ದಾರೆ ಅಂದರೆ ಸಾಕ್ಷಿ ನನ್ನ ಗಂಡನ ಸಹೋದರಿಯರು ಸಲ್ಲಿಸಿದ್ದಾರೆಂದು ನುಡಿಯುತ್ತಾರೆ. ಆ ದಾವೆಯನ್ನು ನಾನೇ ಹೇಳಿಕೊಟ್ಟು ಹಾಕಿಸಿರುವುದು ಅಂದರೆ ಸರಿಯಲ್ಲ.

33. ಅವರಿಗೆ ಕ್ರಯಪತ್ರ ಬರೆದುಕೊಡದೇ ಈ ರೀತಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ಈ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲಲ ಅಂದರೆ ಸರಿಯಲ್ಲ. ದಾವಾ ಸ್ವತ್ತು 14ನೇ ಪ್ರತಿವಾದಿಗೆ ಸೇರಿದ ಸ್ವತ್ತು ಅಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**